# ಭತ್ತದ ಸಂರಕ್ಷಣೆ ಬಗ್ಗೆ ಕುಂಬಲಂಗಿ ಘೋಷಣೆ




ದ್ವಿತೀಯ ಅಂತಾರಾಷ್ಟ್ರೀಯ 'ಭತ್ತ'ದ ವರ್ಷವಾಗಿರುವ 2004ರಲ್ಲಿ, ಪ್ರಧಾನವಾಗಿ ಭಾರತದ ಭತ್ತ (ಅಕ್ಕಿ) ಬೆಳೆಯುವ ರಾಜ್ಯಗಳಲ್ಲಿರುವ ಪಾರಂಪರಿಕ, ಸುಸ್ಥಿರ ಕೃಷಿಗಾಗಿ ಪರಿಸರ ಸಂರಕ್ಷಣೆಗಾಗಿ, ಬಳಕೆದಾರರ ಹಕ್ಕುಗಳಿಗಾಗಿ, ಕೃಷಿ ಕಾರ್ಮಿಕರಿಗಾಗಿ ಕೆಲಸ ಮಾಡುತ್ತಿರುವ 57 ಸಂಘಟನೆಗಳ ಪ್ರತಿನಿಧಿಗಳಾಗಿರುವ ನಾವು ನಮ್ಮ ಸಂಸ್ಕೃತಿಯ ಅಂಗವಾಗಿ, ಆಹಾರ ಭದ್ರತೆಗೆ ಆಧಾರವಾಗಿ ಮತ್ತು ಒಂದು ಸಮುದಾಯದ ಪರಂಪರೆಯಾಗಿ ಭತ್ತದ ಕುರಿತು ಚರ್ಚೆಗೋಸ್ಕರ ಒಂದುಗೂಡಿ, ಭತ್ತ ಬೆಳೆಯ ಪಾರಂಪರಿಕ ಪದ್ಧತಿಗಳು, ಅದರ ಸಂರಕ್ಷಣೆಯ ಸಮಸ್ಯೆಗಳು ಮತ್ತು ವಿವಿಧ ಉಪಕ್ರಮಗಳ ಕುರಿತು ವಿಚಾರ ವಿನಿಮಯ ನಡೆಸಿದ ಅನಂತರ ಈ ಕೆಳಗಿನ ವಿಷಯಗಳನ್ನು ಗುರುತಿಸಿದ್ದೇವೆ.

1 ಈ ದೇಶದಲ್ಲಿ ಆಹಾರಭದ್ರತೆ ಹಾಗೂ ಭತ್ತದ ಸಂರಕ್ಷಣೆಯಲ್ಲಿ ಕುಲಾಂತರಿ ಭತ್ತ ಮತ್ತು ಸಂಕರತಳಿ (ಹೈಬ್ರಿಡ್) ಭತ್ತಕ್ಕೆ ಯಾವುದೇ ಪಾತ್ರವಿಲ್ಲ. ಇವುಗಳು ರೈತ ಸಮುದಾಯದ ಆಹಾರ ಸಾರ್ವಭೌಮತೆಗೆ ಬೆದರಿಕೆಯೊಡ್ಡುತ್ತವೆಂದು ಗೊತ್ತಾಗಿದೆ.

2. ಹಸಿರು ಕ್ರಾಂತಿಯ ಪರಿಣಾಮವಾಗಿ ಕೃಷಿ ಮತ್ತು ಗ್ರಾಮೀಣ ಸಮುದಾಯಗಳು ಹಾನಿಗೊಳಗಾಗಿವೆ ಹಾಗೂ ಅದು ಸಾಕಷ್ಟು ಪ್ರಮಾಣದಲ್ಲಿ ಉತ್ತಮ ಆಹಾರವನ್ನು ಮತ್ತು ಬದುಕಿಗೆ ಘನತೆಯನ್ನು ಒದಗಿಸಲು ಸಂಪೂರ್ಣ ವಿಫಲವಾಗಿದೆ.

3. ಕಡಿಮೆಯಾಗುತ್ತಿರುವ ಫಸಲು ಮತ್ತು ಮನುಷ್ಯರು, ಸಸ್ಯ, ಪ್ರಾಣಿ ಹಾಗೂ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳಿಂದಾಗಿ ಮತ್ತು ರೈತರಿಗಾಗುತ್ತಿರುವ ಭಾರಿ ನಷ್ಟಗಳಿಂದಾಗಿ ರಸಗೊಬ್ಬರಗಳು, ಕೀಟನಾಶಕಗಳಂತಹ ರಾಸಾಯನಿಕಗಳ ಮೇಲಿನ ಅವಲಂಬನೆಯನ್ನು ಸಂಪೂರ್ಣ ನಿಲ್ಲಿಸಬೇಕು. ಸುರಕ್ಷಿತ ಆಹಾರವನ್ನು ಪಡೆಯಲು ಹಾಗೂ ಭತ್ತವನ್ನು ಸಂರಕ್ಷಿಸಲು ಇವುಗಳ ಅವಶ್ಯವಿಲ್ಲವೆಂದು ಈಗ ನಿಸ್ಸಂಶಯವಾಗಿ ಸಾಬೀತಾಗಿದೆ.

4. ಪಾರಂಪರಿಕ, ಪರಿಸರ ಸಹ್ಯ ಹಾಗೂ ಸರಳ ಕೃಷಿ ಪದ್ಧತಿಗಳನ್ನು ಸಾಮೂಹಿಕವಾಗಿ ಅನುಸರಿಸುವುದು ಇಂದಿನ ಅಗತ್ಯವಾಗಿದೆ.

5. ಈ ವಿಧಾನಗಳ ಮೂಲಕ ದೇಶಕ್ಕೆ ಸಾಕಷ್ಟು ಸುರಕ್ಷಿತ ಆಹಾರವನ್ನು ಒದಗಿಸುವ ಸಾಮರ್ಥ್ಯವಿದೆ.

6. ಸಣ್ಣ ಹಾಗೂ ಅತಿಸಣ್ಣ ರೈತ ಕುಟುಂಬಗಳ ಆಹಾರ ಭದ್ರತೆಯು ನಮಗೊಂದು ಪ್ರಮುಖ ಆದ್ಯತೆಯಾಗಿದೆ.

7. ಕೃಷಿಯ ಬಗ್ಗೆ ನಿರ್ಧಾರ, ನಿರೂಪಣೆ, ಸಂಶೋಧನೆ ಮತ್ತು ವಿಸ್ತರಣೆ ಕಾರ್ಯದಲ್ಲಿ ರೈತರು, ಮಹಿಳೆಯರು ಹಾಗೂ ವಿಶೇಷವಾಗಿ ಪಾರಂಪರಿಕ ಸಾಂಪ್ರದಾಯಿಕ ಜ್ಞಾನ ಹಾಗೂ ವಿವೇಕವುಳ್ಳ ಆದಿವಾಸಿಗಳಿಗೆ ಮನ್ನಣೆ ದೊರಕಬೇಕಾಗಿದೆ.

8. ಆಹಾರ ಲಭ್ಯತೆಗೆ ಜೀವನೋಪಾಯ ಮತ್ತು ಆಹಾರ ಸಾರ್ವಭೌಮತೆ, ಅವಶ್ಯವಾಗಿವೆ.

9. ಇಂತಹ ವಿಧಾನಕ್ಕೆ ಕೃಷಿ ಕಾರ್ಮಿಕರ ಸಮುದಾಯಗಳ, ಕುಶಲಕರ್ಮಿಗಳ, ಸ್ವಉದ್ಯೋಗಿಗಳ, ಸಣ್ಣ ಹಾಗೂ ಅತಿಸಣ್ಣ ರೈತರ ಆಹಾರದ ಅಭದ್ರತೆಯನ್ನು ನಿವಾರಿಸುವ ಸಾಮರ್ಥ್ಯವಿದೆ.

10. ದೇಶದ ಕೃಷಿ ಪ್ರದೇಶಗಳಲ್ಲಿ ಪಾರಂಪರಿಕ ಜ್ಞಾನಸಂಪತ್ತು ಮತ್ತು ಪದ್ಧತಿಗಳು ಸರಿಯಾಗಿ ದಾಖಲಾಗಿಲ್ಲ ಹಾಗೂ ಅರ್ಥೈಸಲ್ಪಟ್ಟಿಲ್ಲ.

11. ನಮ್ಮ ಅನುಭವಗಳನ್ನು ಮತ್ತು ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಮತ್ತು ಆಧಿಪತ್ಯಹೊಂದಲು ಪಾರಂಪರಿಕವಾಗಿ ಲಭ್ಯವಿರುವ ಪದ್ಧತಿಗಳನ್ನು ಜಾಗತೀಕರಣ ಮತ್ತು ಉದಾರೀಕರಣ ನೀತಿಗಳುಹಾಗೂ ಮಾರುಕಟ್ಟೆ ಶಕ್ತಿಗಳ ಪ್ರಭಾವಕ್ಕೊಳಗಾಗದೆ ರಕ್ಷಿಸುವ ಅಗತ್ಯವಿದೆ.

12. ಸಮುದಾಯಗಳ ಆಹಾರ ಸಾರ್ವಭೌಮತೆಯು ಅನೇಕ ಬಾರಿ ಸಾಮಾನ್ಯ ಜನರ ಮೂಲಕ ಈಡೇರಿದೆ. ಅದರ ಮೇಲಿನ ಹಕ್ಕು ಸಮುದಾಯಕ್ಕೆ ಸೇರಬೇಕು.

13. ಅಂತಾರಾಷ್ಟ್ರೀಯ ಭತ್ತದ ವರ್ಷದಲ್ಲಿ ಮಾತ್ರವಲ್ಲ ನಂತರವೂ ಭತ್ತದ ಬೆಳೆಯನ್ನು ಸಂರಕ್ಷಿಸಲು ಜಾಗೃತ, ಪ್ರಜ್ಞಾವಂತ, ಸಾಮೂಹಿಕ ಕ್ರಮ ಇರಲೇಬೇಕಾಗಿದೆ.

**ಆದ್ದರಿಂದ ನಾವು ಹೀಗೆ ಘೋಷಿಸುತ್ತೇವೆ:**

1. ಪಾರಂಪರಿಕ, ಪರಿಸರ ಹಿತ ಕೃಷಿ, ಸಮುದಾಯ ಜ್ಞಾನ ಮತ್ತು ಸ್ಥಳೀಯ ಆಚರಣೆಗಳು ಹಾಗೂ ವಿಧಾನಗಳನ್ನು ಅಂಗೀಕರಿಸುವುದು, ಕಾಪಾಡುವುದು, ಸಂರಕ್ಷಿಸುವುದು ಮತ್ತು ಸಂವರ್ಧಿಸುವುದು ನಮ್ಮ ಮುಂದಿರುವ ವಿಧಾನವಾಗಿದೆ.
2. ಭತ್ತದ ಬೆಳೆಗೆ ರಸಗೊಬ್ಬರಗಳ ಹಾಗೂ ಕೀಟನಾಶಕಗಳ ಬಳಕೆಯನ್ನು ನಿಷೇಧಿಸಬೇಕು.
3. ಸಾವಯವ ಹಾಗೂ ಪಾರಂಪರಿಕ ವ್ಯವಸಾಯ ಪದ್ಧತಿಗೆ ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡಬೇಕು.
4. ಕುಲಾಂತರಿ ಬೀಜಗಳನ್ನು ಮತ್ತು ಹೈಬ್ರೀಡ್‌ತಳಿಯ ಭತ್ತಗಳ ಬಳಕೆಯನ್ನು ನಿಷೇಧಿಸಬೇಕು.
5. ಕಳೆದ 40-50 ವರ್ಷಗಳಲ್ಲಿ ಈ ದೇಶದ ರೈತರಿಂದ ಸಂಗ್ರಹಿಸಿ ದೇಶದ ಹಾಗೂ ಅಂತಾರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳಲ್ಲಿ ಸಂರಕ್ಷಿಸಿಟ್ಟಿರುವ ಭತ್ತದ ಮೊಳಕೆ ಮಾದರಿಗಳನ್ನು ಸಮುದಾಯಗಳಿಗೆ ಹಿಂದಿರುಗಿಸಬೇಕು ಮತ್ತು ಈ ಅಮೂಲ್ಯ ಸಂಪತ್ತಿನ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸಬೇಕು.
6. ಜೀವಮಾದರಿಗಳು, ಉತ್ಪನ್ನಗಳು, ಪ್ರಕ್ರಿಯೆಗಳು, ಪಾರಂಪರಿಕ ಜ್ಞಾನ ಹಾಗೂ ಆಚರಣೆಗಳನ್ನು ಪೇಟೆಂಟ್‌ಮಾಡುವ/ ಏಕಸ್ವಾಮ್ಯಗೊಳಿಸುವ ಉದ್ದೇಶದ ಯಾವುದೇ ರೂಪದ ಶಾಸನಗಳಿಗೆ ಯಾವುದೇ ಹಂತದಲ್ಲಿ ಅವಕಾಶ ನೀಡಬಾರದು.
7. ಈಗಿನ ಹಾಗೂ ಮುಂದಿನ ಎಲ್ಲಾ ವ್ಯಾಪಾರ ಒಪ್ಪಂದಗಳಿಂದ ಕೃಷಿಯನ್ನು ಹೊರಗಿಡಬೇಕು.
8. ಪ್ರಮುಖ ಆಹಾರ ಬೆಳೆಯಾದ ಅಕ್ಕಿಯನ್ನು ಸಂರಕ್ಷಿಸಲು ನಾವು ಸಾಮೂಹಿಕವಾಗಿ ಶ್ರಮಿಸುವೆವು.

**2004ರ ಡಿಸೆಂಬರ್ 9 ರಿಂದ 11 ರ ತನಕ ಕೇರಳದ ಎರ್ನಾಕುಲಂ ಜಿಲ್ಲೆಯ ಕುಂಬಲಂಗಿ ಗ್ರಾಮದಲ್ಲಿ ನಡೆದ "ಭತ್ತ"ದ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಅಂಗೀಕರಿಸಿದ ಘೋಷಣೆ.**

Save our Rice Campaign in India is facilitated by Thanal, Thiruvananthapuram and IIRD, Aurangabad

THANAL, H-3 Jawaharnagar, Kowdiar P.O., Thiruvananthapuram, Kerala, India. PIN-695 003
Tel / Fax: +91 471 2727150. E-mail: saverice@thanal.org, thanal@md4.vsnl.net.in
Web: www.thanal.org